ಪ್ರಬಂಧ

# ಗಡಿಯಾರ ಮತ್ತು ಸಾವು



**ಟಿ.ಎಂ. ರಮೇಶ**

ಕಲೆ: ಸಂತೋಷ್ ಸಸಹಿತ್ಲು

**Time is a trap. I'm caught in it.**
**–Margaret Atwood.**

'ಅವನ ಸಮಯ ಮುಗಿದಿತ್ತು.' ಸಾವಿನ ಮನೆಯಲ್ಲಿ ಕೇಳುವ ಕಾಯಂ ಡಯಲಾಗು ಇದು. ಆಯುಷ್ಯ ತೀರಿತು ಎನ್ನುವ ಅರ್ಥದಲ್ಲಿ ಈ ಮಾತನ್ನು ನಾವು ನೀವೆಲ್ಲ ಉಪಯೋಗಿಸುವುದು. ಅನಾದಿ ಕಾಲದಿಂದಲೂ ಈ ಸಮಯ ಮತ್ತು ಮಾನವನ ಆಯುಷ್ಯವನ್ನು ಒಂದೇ ಅರ್ಥದಲ್ಲಿ ಬಳಸುವುದಕ್ಕೆ ಕಾರಣ, ಬದುಕನ್ನು ವರ್ಷದ ಕಾಲಮಾನದಲ್ಲಿ ನಿರ್ಧರಿಸುವುದೇ ಆಗಿರಬೇಕು. ಅದಕ್ಕೆ ನನ್ನದೇನು ಆಕ್ಷೇಪವಿಲ್ಲ ಬಿಡಿ. ಸಮಯಕ್ಕೆ ಪರ್ಯಾಯ ಶಬ್ದವಾಗಿ 'ಗಡಿಯಾರ'ವನ್ನು ಬಳಸುವ ರೂಢಿ ನನಗೆ ಸ್ವಾರಸ್ಯಕರವಾಗಿ ಕಾಣಿಸುತ್ತದೆ. ಮುಖ್ಯವಾಗಿ, ಕಾವ್ಯ ಕಥನಗಳಲ್ಲಿ ಗಡಿಯಾರಕ್ಕೂ ಮನುಷ್ಯನ ಜೀವಕ್ಕೂ ಒಂದು ಗಂಟು ಹಾಕಿಕೊಂಡೇ ಬಹಳಷ್ಟು ಸಾಹಿತಿಗಳು ಬರೆದಿರುವುದನ್ನು, ಸಾಯುವ ಮನುಷ್ಯನೊಟ್ಟಿಗೆ ನಿಂತುಹೋಗಿರುವ ಗಡಿಯಾರ ಚಿತ್ರಿಸಿರುವ ಚಿತ್ರಕಲಾವಿದರನ್ನು ನಾವು ಕಾಣುತ್ತೇವೆ. 'ಸಾವಿನ ಬಗ್ಗೆ ಎಚ್ಚರಿಸಲು ಕಾಲರಾಯನು ವರ್ಷಕ್ಕೊಮ್ಮೆ ಗಂಟೆ ಬಾರಿಸುವ ದಿನವೇ ಜನ್ಮದಿನ' ಎಂದು ಬೀಚಿಯವರು ಜನ್ಮದಿನದ ಬಗ್ಗೆ ಬರೆದು, ಸಾವು ಮತ್ತು ಗಂಟೆಯನ್ನ ಜೋಡಿಸಿಲ್ಲವೆ?

ಸಾಹಿತಿಗಳೋ ಕವಿಗಳೋ ಗಡಿಯಾರವನ್ನು ಸಾವಿಗೆ ರೂಪಕವಾಗಿ ಬಳಸಿರುವುದಂತಿರಲಿ, ಜನಪದವೂ ಹಾಗೇ ಬಳಸುತ್ತಿರುವುದೊಂದು ವಿಸ್ಮಯ. ಆರಂಭದಲ್ಲಿಯೇ ಹೇಳಿದ, 'ಅವನ ಸಮಯ ಮುಗಿದಿತ್ತು', 'ಟೈಂ ಮುಗಿದರೆ ಎಲ್ಲರ ಪಾಡೂ ಒಂದೇ' ಇತ್ಯಾದಿ ರೂಢಿಮಾತುಗಳು, ಅಳು ಕೇಳಿಸುವ ಸಾವಿನ ಮನೆಗಳಲ್ಲಿ ಸಾಮಾನ್ಯ.

ಅಷ್ಟಕ್ಕೂ ಗಡಿಯಾರ ಅಂದರೆ ಏನು? ಸಮಯ ತೋರಿಸುವ ಅಥವಾ ದಿನದ ಕಾಲಗಣನೆಯ ಒಂದು ಯಂತ್ರ ಎಂದಷ್ಟೆ. ಒಂದು ದಿನದ ಅವಧಿಯ, ಅಂದರೆ ಇಪ್ಪತ್ನಾಲ್ಕು ಗಂಟೆಯ ಅವಧಿಯನ್ನಷ್ಟೇ ಹನ್ನೆರಡು–ಹನ್ನೆರಡಾಗಿ ಗಡಿಯಾರ ತೋರಿಸುತ್ತದೆ. ಹಗಲು ರಾತ್ರಿಗಳ ಭೇದವನ್ನು ನಾವು ಮಾಡಿಕೊಳ್ಳಬೇಕಷ್ಟೆ. ಮಾಸಗಣನೆ ವರ್ಷಗಣನೆಗಳೇನೇ ಇದ್ದರೂ, ದಿನದರ್ಶಿಕೆ ಅಥವಾ ಕ್ಯಾಲೆಂಡರುಗಳ ಮೊರೆ ಹೋಗಬೇಕು. ಹಾಗಿದ್ದೂ ಆಯುಷ್ಯ ಅಥವಾ ಮಾನವ ಕಾಲಸೂಚಕವಾಗಿ ಗಡಿಯಾರವನ್ನೇ ರೂಪಕವಾಗಿ ಬಳಸುತ್ತಾರೆ. ಗಡಿಯಾರ ಕೂಡ ಹೃದಯದ ಬಡಿತದ ಹಾಗೆ ಒಂದೇ ಲಯದಲ್ಲಿ